ಖರ್ಚಾಗುತ್ತದೆ. ಅಧಿಕಾರಿಗಳಿಗೆ ದುಡ್ಡು ಕೊಟ್ಟರೆ ಜಿನ್ಸಾಗಿ ನೋಡಿಕೊಳ್ಳುತ್ತಾರಂತೆ. ಆದ್ದರಿಂದ ಮಾನ್ಯ ಲಕ್ಷ್ಮೀಸಾಗರ್ ಅವರಲ್ಲಿ ನಾನು ಮನವಿ ಮಾಡಿಕೊಳ್ಳುವುದಿಷ್ಟೆ.....

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲಿ ಈ ರೀತಿ ತೊಂದರೆ ಇದೆ ಎಂದು ಯಾರು ನಿಮಗೆ ದೂರುಗಳನ್ನು ಕೊಡುತ್ತಾರೋ, ಅಂತಹವರನ್ನು ನನ್ನ ಬಳಿ ಕಳುಹಿಸಿಕೊಡಿ. ಅವರು ಹೇಳುವಂತಹ ದೂರಿನ ಆಧಾರದ ಮೇಲೆ ನಾನು ಯಾರ ಮುಲಾಜು ಇಲ್ಲದೆ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಗಂಧದ ಮರದ ಕಳ್ಳ ಸಾಗಾಣಿಕೆ

೧೯೯೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅರಣ್ಯಗಳಿಂದ ಅಕ್ರಮವಾಗಿ ಮರ ಮುಟ್ಟುಗಳ ಸಾಗಾಣಿಕೆಗಳಲ್ಲಿ ಅರಣ್ಯಾಧಿಕಾರಿಗಳಿಗೆ ಹೆಚ್ಚು ನೆರವು ಕಲ್ಪಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಆ) ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಪತ್ತೆಯಾದ ಶ್ರೀಗಂಧ ಮರದ ಅಕ್ರಮ ಸಾಗಾಣಿಕೆಯಲ್ಲಿ ಪತ್ತೆಯಾದ ಪ್ರಕರಣಗಳೆಷ್ಟು ?

ಇ) ಸಾಗಿದ್ದಲ್ಲಿ ಈ ಅವಧಿಯಲ್ಲಿ ಜಪ್ತಿಮಾಡಿಸಿಕೊಂಡ ಶ್ರೀಗಂಧದ ಪ್ರಮಾಣ ಮತ್ತು ಅದರ ಮೌಲ್ಯವೆಷ್ಟು ?

ಶ್ರೀ ಜಿ.ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ೧೯೮೭-೮೮ನೇ ಸಾಲಿನಲ್ಲಿ (ಮಾರ್ಚ್ ಅಂತ್ಯದವರೆವಿಗೆ) ಪತ್ತೆಯಾದ ಪ್ರಕರಣಗಳ ಸಂಖ್ಯೆ ೭೫೩.

ಇ) ೧೯೮೭-೮೮ನೇ ಸಾಲಿನ ಮಾರ್ಚ್ ಅಂತ್ಯದ ವರೆವಿಗೆ ಜಪ್ತಿಮಾಡಿಸಿಕೊಂಡ ಗಂಧದ ಪ್ರಮಾಣ ಕೆ.ಜಿ. ೩,೪೪೨.೬೯೨ ಇದ್ದು ಇದರ ಮೌಲ್ಯ ರೂ. ೨,೦೧,೮೧,೧೫೦-೦೦ ಆಗಿರುತ್ತದೆ.

ಶ್ರೀ ಜಿ. ರಾಮದಾಸ್.—ಈ ಮರಮುಟ್ಟುಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಅರಣ್ಯಾಧಿಕಾರಿಗಳಿಗೆ ಸರ್ಕಾರದವರು ಯಾವಯಾವ ನೆರವು ಹಾಗೂ ಸಹಾಯವನ್ನು ಒದಗಿಸಿದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಸಿ. ರವೀಶ್ ಜಿಗಜಿಣಗಿ.—ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಈ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಅದು ಈ ರೀತಿ ಇದೆ.—

೧) ಕರ್ನಾಟಕ ಅರಣ್ಯ ಕಾಯಿದೆ ೧೯೬೩ರ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

೨) ೧೮ ಅರಣ್ಯ ಸಂಚಾರಿ ದಳಗಳಿದ್ದು ಅವು ಅವ್ಯಾಹತವಾಗಿ ಅರಣ್ಯ ಗುನೆ ವ್ಯಕರಣಗಳನ್ನು ಪತ್ತೆ ಹೆಚ್ಚಲು, ಅಪರಾಧಿಗಳನ್ನು ಬಿಡಿದು ಕ್ರಮ ಕೈಕೊಳ್ಳಲು ಇನ್ನೂ ೯ ಅರಣ್ಯ ಸಿಬ್ಬಂದಿಗಳೊಂದಿಗೆ ಶ್ರಮಿಸುತ್ತಿದ್ದಾರೆ ಮತ್ತು ಪಹರೆ ನಡೆಸುತ್ತಿದ್ದಾರೆ.

೩) ಅರಣ್ಯ ಸಿಬ್ಬಂದಿಗಳಿಗೆ ಸ್ವಸಂರಕ್ಷಣೆಗಾಗಿ ಆಯುಧಗಳನ್ನು ನೀಡಲಾಗಿದೆ. ತ್ವರಿತ ಕಾರ್ಯಾಚರಣೆಗಾಗಿ ಇಲಾಖೆಯ ಕಾರುಗಳನ್ನು, ಲಾರಿಗಳನ್ನು ಮತ್ತು ಜೀಪುಗಳನ್ನು ನೀಡಲಾಗುತ್ತಿದೆ.

ಳ) ಅರಣ್ಯ ಸಂಪತ್ತು ಹಾರಾಗಿ ಹೋಗುವ ನೆರೆ ರಾಜ್ಯದ ಗಡಿಗಳಲ್ಲಿ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ನಿಸ್ತಂತು ಘಟಕಗಳನ್ನು ಸ್ಥಾಪಿಸಿ ತ್ವರಿತ ಸಂಪರ್ಕಕ್ಕಾಗಿ ಅರಣ್ಯ ಕಾರ್ಯಾಚರಣೆಯ ಸಿಬ್ಬಂದಿಗೆ ಅನುಕೂಲತೆ ಒದಗಿಸಲಾಗಿದೆ.

ಕ) ಎಲ್ಲಾ ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ಗುನೆ ಗಳನ್ನು ಪ್ರತಿಬಂಧಿಸಲು ಮತ್ತು ಪತ್ತೆ ಹೆಚ್ಚುವಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.

ಶ್ರೀ ಜಿ. ರಾಮದಾಸ್.—ನನ್ನ ಕ್ಷೇತ್ರದಲ್ಲಿ ಪೊಸದುರ್ಗ ಮತ್ತು ಹೊಳಲ್ಕೆರೆ ನಡುವೆ ದೇವರ ಗುಡ್ಡ ಎಂಬ ಹೆಸರಿನ ಅರಣ್ಯವಿದೆ. ಇಲ್ಲಿಂದ ಗಂಧದ ದಾರ ಕಳ್ಳಸಾಗಾಣಿಕೆ ಆಗುವುದನ್ನು ತಡೆಗಟ್ಟಲಂ ಹಾಗೂ ಕಳ್ಳರನ್ನು ಹಿಡಿಯಲು ಅಲ್ಲಿನ ಅರಣ್ಯಾಧಿಕಾರಿಗಳು ಹೆದರುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಅವರಿಗೆ ಯಾವ ಒಂದು ಅನುಕೂಲಗಳನ್ನೂ ನೀವು ಒದಗಿಸಿಕೊಟ್ಟಿಲ್ಲ. ಅಲ್ಲಿ ಇತ್ತೀಚೆಗೆ ಸುಮಾರು ೫೦ ಕೆ.ಜಿ. ಗಂಷ್ಟು ಗಂಧದ ದಾರಗಳನ್ನು ಜೀಪ್ ಒಂದರಲ್ಲಿ ಹಾಕಿ ಕೊಂಡ್ಡು ಕಳ್ಳಸಾಗಾಣಿಕೆ ಮಾಡುತ್ತಿದ್ದುದನ್ನು ಡಿ. ಮಲ್ಲಾಪುರದ ಜನರು ಪತ್ತೆ ಮಾಡಿ ಆ ಜೀಪನ್ನು ತಂದು ಅಲ್ಲಿನ ಅರಣ್ಯಾಧಿಕಾರಿಗಳ ವಶಕ್ಕೆ ಕೊಟ್ಟಿದ್ದಾರೆ. ಈಗ ಮಾಡಿರುವ ಆ ಜೀಪನ್ನು ರಿಲೀಜ್ ಮಾಡಿಸಿ ಅಲ್ಲಿನ ಅರಣ್ಯಾಧಿಕಾರಿಗಳಿಗೆ ಕೊಟ್ಟಿರೆ. ಆದರು ರಾತ್ರಿ ಸಮಯದಲ್ಲಿ ಜೀಪ್‌ನಲ್ಲಿ ಹೋಗಿ ಪಹರೆ ನಡೆಸಲು ಮತ್ತು ಕಳ್ಳಸಾಗಾಣಿಕೆದಾರರನ್ನು ಪತ್ತೆ ಮಾಡಿ ಹಿಡಿಯಲು ಅನುಕೂಲವಾಗುತ್ತದೆ. ಆದ್ದರಿಂದ ಆ ಜೀಪ್‌ನ್ನು ಕೂಡಲೇ ರಿಲೀಜ್ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಮೇಶ್ ಜಿಗಜಿಣಗಿ.—ಕಾನೂನಿನ ಚೌಕಟ್ಟಿನಲ್ಲಿ ಆದನ್ನು ರಿಲೀಜ್ ಮಾಡಿಸುವುದಕ್ಕೆ ಅವಕಾಶವಿದ್ದರೆ ಖಂಡಿತವಾಗಿಯೂ ಮಾಡಿಸಿಕೊಡುತ್ತೇನೆ. ಮುಂದ್ಕಿವಾಗಿ ಕಳ್ಳಸಾಗಾಣಿಕೆದಾರರನ್ನು ಹಿಡಿಯಲು ಯಾವಯಾವ ಕ್ರಮಗಳನ್ನು ಕೈಕೊಳ್ಳಬೇಕೋ ಅದನ್ನೆಲ್ಲಾ ಕೈಕೊಳ್ಳುತ್ತಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಿ. ಲಕ್ಕಪ್ಪನವರು ಅರ್ಜೆಂಟ್ ಆಗಿ ಎಲ್ಲಿಗೋ ಹೋಗಬೇಕಾಗಿದೆಯಂತೆ. ಅದಕ್ಕಾಗಿ ಈಗ ಅವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜಿನ ಬಗ್ಗೆ

೨೦೬೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಕುಡಿಯುವ ನೀರು ಸರಬರಾಜಿಗಾಗಿ ಅಗತ್ಯ ವಿದ್ಯುತ್ ಸರಬರಾಜು ಪಡೆಯುವಾಗ ಕೊಳವೆ ಬಾವಿ ಗ್ರಾಮ ಠಾಣಾದಲ್ಲಿ ಇಲ್ಲದೆ. ಸರ್ವೆ ನಂಬರಿನಲ್ಲಿ ಅಥವಾ ಬೇರೆ ಜಮೀನಿನಲ್ಲಿ ಇದ್ದರೆ, ವಿದ್ಯುತ್ ಸರಬರಾಜಿನ ಅಂದಾಜು ಪೆಚ್ಚಿಕಟ್ಟಬೇಕೆಂಬುದು ನಿಜವೆ?

ಆ) ಹಾಗಿದ್ದಲ್ಲಿ ಈ ರೀತಿ ಕಟ್ಟಲು ಮಂಡಲ ಪಂಚಾಯಿತಿಗಳಿಗೆ ಹಣ ಒದಗಿಸಲಾಗಿದೆಯೇ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ನಿಜ. ಆದರೆ ಈ ಕೊಳವೆ ಬಾವಿಗಳು ಮಂಡಲ ಪಂಚಾಯಿತಿಯವರೇ ಮಾಡಿದ ಲೇಔಟ್‌ಗಳಿದ್ದರೆ ಈ ಹಣವನ್ನು ಪಂಚಾಯಿತಿಯವರು ಭರಿಸಬೇಕಾಗಿಲ್ಲ.

ಆ) ಅವರಿಗೆ ಒದಗಿಸಿರುವ ಅನುದಾನದಲ್ಲಿ ಈ ಪೆಚ್ಚಿನನ್ನು ಪಂಚಾಯತಿಗಳು ಭರಿಸಬೇಕು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ. ಗ್ರಾಮಾಂತರಗಳಲ್ಲಿ ಕೊಳವೆಬಾವಿಗಳಲ್ಲಿ ನೀರಿ ಸಿಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ ಹಳ್ಳಿಗಳಿಗೆ ಗ್ರಾಮಾಂತರ ನೀರು ಸರಬರಾಜು ಯೋಜನೆ, ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಕುಡಿಯುವ ನೀರನ್ನು ಸಪ್ಲೈ ಮಾಡಬೇಕು. ಗ್ರಾಮಾಂತರಗಳಲ್ಲಿ ನೀರು ಸಿಕ್ಕದೇ ಹೋದರೆ. ಪಕ್ಕದ ಸರ್ಕಾರಿ ಭೂಮಿಯನ್ನು ಕೊರೆದು ನೀರನ್ನು ಒದಗಿಸಬೇಕಾಗುತ್ತದೆ ಟ್ಯಾಂಕ್‌ಗಳಾಗಿ ಎಲ್ಲಾ ವರ್ಕ್ ವಂಗಿದು ಪವರ್